# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು.

## ಃಸಿ.ಸಿ. ಸಂಖ್ಯೆಃ 46ಃ2019

ಪಿರ್ಯಾದಿ ಃ ಶ್ರೀ ಎಸ್.ಪಿ. ಮಣಿಕಂಠ ಬಿನ್ ಲೇಟ್ ಪುಟ್ಟೇಗೌಡ,
ಸುಮಾರು 30 ವರ್ಷ ವಯಸ್ಸು,
ಹೊಳೆ ಬೀದಿ,
3 ನೇ ಕ್ರಾಸ್, ಬೇಲೂರು ಪಟ್ಟಣ,
ಹಾಸನ ಜಿಲ್ಲೆ.

ವಿರುದ್ದ

ಆರೋಪಿ ಃ ಶ್ರೀ ಅಯಾಜ್ ಅಹಮ್ಮದ್ ಬಿನ್ ಡಿ.ಎಂ. ಇಬ್ರಾಹಿಂ,
ಸುಮಾರು 48 ವರ್ಷ ವಯಸ್ಸು,
ಬಜಾಜ್ ಶೋರೂಂ
ಹಳೇಬೀಡು ರಸ್ತೆ,
ಬೇಲೂರು ಪಟ್ಟಣ,
ಹಾಸನ ಜಿಲ್ಲೆ.

## ಃ ಆರೋಪಣೆಯ ಸಾರಾಂಶ ಃ

ಆರೋಪಿಯಾದ ನೀವು ಏಪ್ರಿಲ್ 2018 ರ ಮೊದಲ ವಾರದಲ್ಲಿ ಪಿರ್ಯಾದಿಯ ಬಳಿ ಬಂದು ನಿಮ್ಮ ದರುದ್ದು ನಿಮಿತ್ತ ಅಂದರೆ ನಿಮ್ಮ ಬಜಾಜ್ ಶೋರೂಂ ನ ಅಭಿವೃದ್ಧಿಗೋಸ್ಕರ ತುರ್ತಾಗಿ ರೂ.2,00,000/– ಹಣದ ಅವಶ್ಯಕತೆ ಇದೆ ಕೊಡಿ, 1 1/2 ತಿಂಗಳಲ್ಲಿ ಕೊಡುವುದಾಗಿ ಕೇಳಿದ್ದು, ಅದರಂತೆ ಪಿರ್ಯಾದುದಾರರು ಆರೋಪಿಯಾದ ನಿಮಗೆ ಅಂದೇ ರೂ.2,00,000/– ಗಳನ್ನು ಸಾಲವಾಗಿ ನೀಡಿದ್ದು, ಸದರಿ ಸಾಲ ಮರುಪಾವತಿ ಮಾಡುವ ಉದ್ದೇಶದಿಂದ ಆರೋಪಿಯಾದ ನೀವು ಖಾತೆ ಹೊಂದಿರುವ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಬೇಲೂರು ಶಾಖೆಯ ಚೆಕ್ ನಂಃ 007993 ರ ರೂ.2,00,000/– ಮೊತ್ತದ ಚೆಕ್‌ನ್ನು ದಿನಾಂಕಃ 17–05–2018 ಕ್ಕೆ ನಮೂದಿಸಿ ಕೊಟ್ಟಿದ್ದು, ಪಿರ್ಯಾದುದಾರರು ಸದರಿ ಚೆಕ್‌ನ್ನು ನಗದೀಕರಿಸಿಕೊಳ್ಳುವ ಉದ್ದೇಶದಿಂದ ಪಿರ್ಯಾದಿಯು

ಬ್ಯಾಂಕ್ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್ ಲಿ., ಬೇಲೂರು ಶಾಖೆಯ ಮೂಲಕ ಆರೋಪಿಯಾದ ನಿಮ್ಮ ಬ್ಯಾಂಕ್‌ಗೆ ಹಾಜರುಪಡಿಸಿದಾಗ ನೀವು ಕೊಟ್ಟಂಟಹ ಚೆಕ್ ನಗದಾಗದೇ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ದಿನಾಂಕಃ 23–05–2018 ರಂದು ಬಂದ ಹಿಂಬರಹದ ಮೇರೆಗೆ, ಆರೋಪಿಯಾದ ನಿಮಗೆ ದಿನಾಂಕಃ 15–06–2018 ರಂದು ಚೆಕ್ ನಗಧೀಕರಣಗೊಳ್ಳದ ಸಂಗತಿಯನ್ನು ನೊಂದಾಯಿತ ಅಂಚೆಯ ನೋಟೀಸಿನ ಮೂಲಕ ಕಳಹಿಸಿದ್ದು, ಸದರಿ ನೋಟೀಸ್ ನಾಟ್ ಕ್ಲೇಮ್ಡ್ ಎಂಬ ಬರಹದೊಂದಿಗೆ ಅಂಚೆ ಲಕೋಟೆ ವಾಪಸ್ಸು ಬಂದಿರುತ್ತದೆ. ಇದರಿಂದ ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ನೀಡದೇ. ಆರೋಪಿಯಾದ ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಸದರಿ ನಿಮ್ಮ ಖಾತೆಯು ನಿರ್ಬಂಧಿಸಿದ ಸ್ಥಿತಿಯಲ್ಲಿ ಇದ್ದರೂ ಸಹ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ ಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*

*ಉತ್ತರ ಃ*

*ಪ್ರಶ್ನೆ ಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*
*ಉತ್ತರಃ/*

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕಃ 12–09–2022.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.